ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಆಗಸ್ಟ್ 12, 2015

## ಹಿರಿಯ ಪತ್ರಕರ್ತ ಕೃಷ್ಣ ವಟ್ಟಂ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

**ಬೆಂಗಳೂರು, ಆಗಸ್ಟ್ 12:**

ಅರಮನೆ ನಗರಿ ಮೈಸೂರಿನ ಹಿರಿಯ ಪತ್ರಕರ್ತ ಶ್ರೀ ಕೃಷ್ಣ ವಟ್ಟಂ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಪತ್ರಕರ್ತರಾಗಿ ಆರು ದಶಕಗಳ ಕಾಲ ಸೇವೆ ಸಲ್ಲಿಸಿ, ಸಾಂಸ್ಕೃತಿಕ ನಗರಿಯ ಅವಿಭಾಜ್ಯ ಅಂಗವಾಗಿದ್ದ ಶ್ರೀ ಕೃಷ್ಣ ವಟ್ಟಂ ಅವರು ಕೇವಲ ಕಿರಿಯ ಪತ್ರಕರ್ತರಿಗೆ ಮಾತ್ರವಲ್ಲದೆ, ಮೂರು ತಲೆಮಾರಿನ ರಾಜಕಾರಣಿಗಳಿಗೆ ಮಾರ್ಗದರ್ಶಿಯಾಗಿದ್ದರು.

ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರೂ, ವೃತ್ತಿಗೆ ಚ್ಯುತಿ ಬಾರದೆ ಕರ್ತವ್ಯ ನಿರ್ವಹಿಸಿದ ಶ್ರೀ ಕೃಷ್ಣ ವಟ್ಟಂ ಅವರು ಕ್ಯಾನ್ಸರ್‌ನಿಂದ ಬದುಕುಳಿದ ತಮ್ಮ 25 ವರ್ಷಗಳ ಜೀವನವನ್ನು ಪುಸ್ತಕ ರೂಪದಲ್ಲಿ ದಾಖಲಿಸಿ, ರಜತ ಸಂಭ್ರಮವನ್ನು ಆಚರಿಸಿಕೊಂಡದ್ದು, ವಿಶೇಷವಾಗಿತ್ತು. ಮೈಸೂರು ಅಭಿವೃದ್ಧಿಯ ತುಡಿತ ಅವರ ನಾಡಿ ಮಿಡಿತದಲ್ಲಿ ಮಿಳಿತವಾಗಿತ್ತು.

ಶ್ರೀ ಕೃಷ್ಣ ವಟ್ಟಂ ಅವರ ನಿಧನದಿಂದ ತಾವು ಆಪ್ತ ಮಿತ್ರನೋರ್ವನನ್ನು ಕಳೆದು ಕೊಂಡಂತಾಗಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**********

ಡಿ ಪಿ ಎಂ